ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಬ್ಬಿ

ದಿನಾಂಕಃ **21** ಜುಲೈ **2026**

ಉಪಸ್ಥಿತರುಃ ಶ್ರೀಮತಿ ಅನುಪಮ ಡಿ.,

ಬಿ.ಕಾಂ., ಎಲ್.ಎಲ್.ಬಿ.,

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ., ಗುಬ್ಬಿ

ಕ್ರಿಮಿನಲ್ ಕೇಸ್ ನಂ. **2423/2023**

ಫಿರ್ಯಾದುದಾರರು ಃ ಕರ್ನಾಟಕ ಸರ್ಕಾರದ ಪರವಾಗಿ, ಪಿ.ಎಸ್.ಐ.
ಗುಬ್ಬಿ ಪೊಲೀಸ್ ಠಾಣೆ
(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು ಃ 1. ಮಂಜುನಾಥ ಸ್ವಾಮಿ
ಬಿನ್ ಹೆಂಜಪ್ಪ
ವಯಸ್ಸು ಃ 55 ವರ್ಷ,

2. ತೇಜಾ ಬಿ ಆರ್
ಕೋಂ ಮಂಜುನಾಥ ಸ್ವಾಮಿ
ವಯಸ್ಸು ಃ 50 ವರ್ಷ,

3. ದರ್ಶನ್ ಬಿ ಎಂ
ಬಿನ್ ಮಂಜುನಾಥ ಸ್ವಾಮಿ
ವಯಸ್ಸು ಃ 25 ವರ್ಷ,

ಎಲ್ಲರ ವಾಸಃ ಬೆಣ್ಣೂರು ಗ್ರಾಮ ,
ಕಡಬಾ ಹೋಬಳಿ , ಗುಬ್ಬಿ ತಾಲ್ಲೂಕು
(ಪ್ರತಿನಿಧಿಸುವವರು ಃ ಶ್ರೀ ಸಿ ಆರ್ ಬಿ
ವಕೀಲರು)

| | | |
|---|---|---|
| **01** | ಘಟನೆ ನಡೆದ ದಿನಾಂಕ | 05-02-2023 |
| **02** | ವರದಿ ಮಾಡಿದ ದಿನಾಂಕ | 10-02-2023 |
| **03** | ಆರೋಪಿತರನ್ನು ಬಂಧಿಸಿದ ದಿನಾಂಕ | |
| **04** | ಫಿರ್ಯಾದುದಾರರ ಹೆಸರು | ನಾಗಮಣಿ ಎ ಸಿ |
| **05** | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 20-07-2026 |
| **06** | ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿದ ದಿನಾಂಕ | 20-07-2026 |
| **07** | ಆರೋಪಿತರ ಮೇಲಿರುವ ಆಪಾದನೆಗಳು | ಭಾ.ದಂ .ಸಂ.ಕಲಂ.323, 341, 354 (ಬಿ), 504 ಮತ್ತು 506 ಸಹವಾಚಕ 34 |
| **08** | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರುಗಳನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಲಾಗಿದೆ. |

**SD/-**
(ಅನುಪಮ ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು
ಪ್ರ.ದಂ.ನ್ಯಾದಂ., ಗುಬ್ಬಿ

<u>ತೀರ್ಪು</u>

ಗುಬ್ಬಿ ಪೊಲೀಸ್ ಠಾಣಾಧಿಕಾರಿಗಳು ಆರೋಪಿತರುಗಳ ವಿರುದ್ಧ ಭಾ. ದಂ.ಸಂ.ಕಲಂ. 323, 341, 354 (ಬಿ), 504 ಮತ್ತು 506 ಸಹವಾಚಕ 34 ರಡಿಯಲ್ಲಿನ ಶಿಕ್ಷಾರ್ಹ ಆರೋಪಗಳ ಸಂಬಂಧ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2.** ದೋಷಾರೋಪಣಾ ಪತ್ರದ ರೀತ್ಯಾ ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ದಿನಾಂಕ 05/02/2023 ರಂದು ರಾತ್ರಿ 7-30 ಗಂಟೆಯಲ್ಲಿ ಫಿರ್ಯಾದಿ ಸಾಕ್ಷಿ 01 ರವರು ಅತ್ತಿಕಟ್ಟೆ ಗ್ರಾಮದ ನಾಡ ಕಚೇರಿ ಬಳಿ ಚೀಟಿ ಹಣ ಕಟ್ಟಲು ಹೋಗಿದ್ದಾಗ 1 ನೇ ಆರೋಪಿತರು ಸಾಕ್ಷಿ 01 ನಾಗಮಣಿ ರವರಿಗೆ ಏಕಾ ಏಕಿ ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಹೊಡೆದು, ಕೆಳಗೆ ಕೆಡವಿ, ಕಾಲಿನಿಂದ ಒದ್ದು, ಸಾಕ್ಷಿ 01 ರವರು ತೊಟ್ಟಿದ್ದ ಚೂಡಿದಾರ ಎಳೆದಾಡಿ, ಎದೆಯ ಭಾಗ , ಭುಜದ ಭಾಗ, ಹಾಗು ಪ್ಯಾಂಟಿನ ಮಂಡಿ ಹತ್ತಿರ, ಹರಿದು ಹಾಕಿದ್ದು ಜಗಳವಾಗುತ್ತಿದ್ದಾಗ ಸಾಕ್ಷಿ 03 ಸಿದ್ದಗಂಗಮ್ಮ ರವರು ಬಂದು ಜಗಳ ಬಿಡಿಸಿದ್ದು ಅದೇ ಸಮಯಕ್ಕೆ ಸಾಕ್ಷಿ 02 ದಿಲೀಪ ಎ ಬಿ ರವರು ಬಂದು 1 ನೇ ಆರೋಪಿತರಿಗೆ ಏತಕ್ಕೆ ಸಾಕ್ಷಿ 01 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿದ್ದಿಯಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿತರು ಸಾಕ್ಷಿ 02 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ನೀವಿಬ್ಬರು ನಮ್ಮೂರಿಗೆ ಬನ್ನಿ ನಿಮ್ಮಿಬ್ಬರನ್ನು ಕತ್ತರಿಸಿ ಕೊಲೆ ಮಾಡುತ್ತೇನೆ, ಎಂದು ಬೆದರಿಕೆ ಹಾಕಿರುತ್ತಾರೆ , ನಂತರ ಅದೇ ದಿನ ಸಾಕ್ಷಿ 02 ರವರು ಸಾಕ್ಷಿ 01 ರವರಿಗೆ ಚಿಕಿತ್ಸೆಗಾಗಿ ನಿಟ್ಟೂರು ವೈದ್ಯಾಧಿಕಾರಿಗಳ ಬಳಿಗೆ ತನ್ನ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗುವಾಗ ಬೆಣ್ಣೂರು ಬಸ್ ನಿಲ್ದಾಣದ ಬಳಿ ಸಾಕ್ಷಿ 01 ಮತ್ತು ಸಾಕ್ಷಿ 02 ರವರು ಬೈಕಿನಲ್ಲಿ ಹೋಗುತ್ತಿದ್ದವರನ್ನು 1 ರಿಂದ 3 ನೇ ಆರೋಪಿತರುಗಳು ತಡೆದು ನಿಲ್ಲಿಸಿ ಸಾಕ್ಷಿ 02 ರವರಿಗೆ 1 ನೇ ಮತ್ತು 3 ನೇ ಆರೋಪಿತರುಗಳು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ಬೆದರಿಕೆ ಹಾಕಿದ್ದು ಸಾಕ್ಷಿ 01 ರವರಿಗೆ 2 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ಬೆದರಿಕೆ ಹಾಕಿದ್ದು ಹಾಗು ಸಾಕ್ಷಿ 01 ರವರಿಗೆ 1 ನೇ ಆರೋಪಿತರು ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಾಗಳಾಗಿದ್ದು ಸದರಿ

ಕಾರಣಗಳಿಂದ ಆರೋಪಿತರುಗಳು ಭಾ.ದಂ.ಸಂ.ಕಲಂ. 323, 341, 354 (ಬಿ), 504 ಮತ್ತು 506 ಸಹವಾಚಕ 34 ರಡಿಯಲ್ಲಿ ದಂಡನೀಯ ಆರೋಪಗಳನ್ನು ಎಸಗಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಫಿರ್ಯಾದಿಯು ದೂರನ್ನು ನೀಡಿದ ನಂತರ ತನಿಖಾಧಿಕಾರಿಗಳು ಆರೋಪಿತರುಗಳ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರುಗಳ ವಿರುದ್ಧ ಭಾ.ದಂ.ಸಂ.ಕಲಂ. 323, 341, 354 (ಬಿ), 504 ಮತ್ತು 506 ಸಹವಾಚಕ 34 ರಡಿಯಲ್ಲಿನ ಶಿಕ್ಷಾರ್ಹ ಆರೋಪಗಳ ಸಂಬಂಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ನಂತರ ಆರೋಪಗಳ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು . ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆರೋಪಿತರುಗಳಿಗೆ ದೋಷಾರೋಪಣಾ ಪತ್ರದ ಪ್ರತಿಯನ್ನು ನೀಡಲಾಗಿದೆ. ಆರೋಪಿತರುಗಳ ವಿರುದ್ಧ ದೋಷಾರೋಪಣೆ ರೂಪಿಸಲು ಸಾಕಷ್ಟು ಅಂಶಗಳು ಇದ್ದುದರಿಂದ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ಹೇಳಲಾಗಿದ್ದು ಅವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದು ವಿಚಾರಣೆ ಆಗಬೇಕೆಂದು ಕೋರಿದ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು .

4. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಅಂತಿಮ ದೋಷಾರೋಪಣೆ ಪಟ್ಟಿಯಲ್ಲಿ ಒಟ್ಟು 9 ಜನ ಸಾಕ್ಷಿದಾರರುಗಳನ್ನು ಪಟ್ಟಿ ಮಾಡಿದ್ದು, ಅವರುಗಳಲ್ಲಿ ಇಬ್ಬರು ಸಾಕ್ಷಿದಾರರುಗಳನ್ನು ಅಭಿಯೋಜನೆಯು ಫ್ರಾಸಾ 1 ಮತ್ತು 2 ಎಂಬುದಾಗಿ ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡಿರುತ್ತದೆ ಹಾಗೂ ನಿಪಿ 1 ರಿಂದ 6 ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿದ್ದು, ಫ್ರಾಸಾ 1 ಮತ್ತು 2 ರವರು ನೀಡಿರುವ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರುಗಳ ವಿರುದ್ಧ ಮಾಡಲಾಗಿರುವ ಗುರುತರ ಆರೋಪಗಳ ಸಂಬಂಧ ಯಾವುದೇ ಅಂಶಗಳು ಕಂಡುಬರದೇ ಇರುವ ಕಾರಣ ದಂಡ ಪ್ರಕ್ರಿಯಾ ಸಂಹಿತೆ 313 ರಡಿಯಲ್ಲಿನ ಹೇಳಿಕೆಯಿಂದ ವಿನಾಯಿತಿ ನೀಡಲಾಗಿದೆ .

5. ಎರಡೂಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು .

**6.** ಈ ಮೇಲ್ಕಾಣಿಸಿದ ವಿವರಗಳಿಂದ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ,

**1)** **<u>ಅಂಶ.ಃ1</u>** ಅಭಿಯೋಜನೆಯು ದಿಃ05-02-2023 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಸಾಕ್ಷಿ 1 ನಾಗಮಣಿ ಎ ಸಿ ರವರು ಅತ್ತಿಕಟ್ಟೆ ಗ್ರಾಮದ ನಾಡ ಕಚೇರಿ ಬಳಿ ಚೀಟಿ ಹಣ ಕಟ್ಟಲು ಹೋಗಿದ್ದಾಗ 1 ನೇ ಆರೋಪಿತರು ಸಾಕ್ಷಿ 1 ರವರಿಗೆ ಏಕಾಏಕಿ ಅವಾಚ್ಯ ಶಬ್ದಗಳಿಂದ ಬೈದು, ಅದೇ ಸಮಯಕ್ಕೆ ಸ್ಥಳಕ್ಕೆ ಬಂದ ಸಾಕ್ಷಿ 2 ದಿಲೀಪಾ ಎ ಬಿ ರವರು ಏಕೆ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡುತ್ತಿದ್ದೀರಿ ಎಂದು ಕೇಳಿದ ಕಾರಣ ನೀವು ಅವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿದ್ದು, ನಂತರ ಅದೇ ದಿನ ಸಾಕ್ಷಿ 2 ರವರು ಸಾಕ್ಷಿ 1 ರವರನ್ನು ಚಿಕಿತ್ಸೆಗೆಂದು ನಿಟ್ಟೂರು ವೈದ್ಯಾಧಿಕಾರಿಗಳ ಬಳಿ ಕರೆದುಕೊಂಡು ಹೋಗುವಾಗ ಬೆಣ್ಣೂರು ಬಸ್ ನಿಲ್ದಾಣದ ಬಳಿ ಬೈಕ್ ನಲ್ಲಿ ಹೋಗುತ್ತಿದ್ದವರನ್ನು ನಿಲ್ಲಿಸಿ 1 ಮತ್ತು 3 ನೇ ಆರೋಪಿತರುಗಳು ಸಾಕ್ಷಿ 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, 2 ನೇ ಆರೋಪಿತರು ಸಾಕ್ಷಿ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಭಾ.ದಂ .ಸಂ. ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಆರೋಪವನ್ನು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**<u>ಅಂಶ.ಃ2</u>** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ಆರೋಪಿತರು ಸಾಕ್ಷಿ 1 ರವರಿಗೆ ಕೈಗಳಿಂದ ಹೊಡೆದು, ಕೆಳಗೆ ಕೆಡವಿ ಕಾಲಿನಿಂದ ಒದ್ದಿದ್ದು, ಸಾಕ್ಷಿ 2 ರವರು ಸ್ಥಳಕ್ಕೆ ಬಂದು ಏಕೆ ಸಾಕ್ಷಿ 1 ರವರಿಗೆ ಹೊಡೆಯುತ್ತಿದ್ದೀರಿ ಮತ್ತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದೀರಿ ಎಂದು ಕೇಳಿದಾಗ 1 ಆರೋಪಿತರು ಸಾಕ್ಷಿ 2 ರವರಿಗೂ ಸಹಾ ಕೈಗಳಿಂದ ಹೊಡೆದಿದ್ದು ಮೇಲೆ ಹೇಳಿದಂತೆ ಬೈಕ್ ನಲ್ಲಿ ಹೋಗುತ್ತಿದ್ದ ಸಾಕ್ಷಿ 1 ಮತ್ತು 2 ರವರನ್ನು 1 ಮತ್ತು 3 ನೇ ಆರೋಪಿತರು ಕೈಗಳಿಂದ ಹೊಡೆದು 2 ನೇ ಆರೋಪಿತರು ಸಾಕ್ಷಿ 1 ರವರಿಗೆ ಕೈಗಳಿಂದ ಹೊಡೆದು, ಸಾಮಾನ್ಯ ಸ್ವರೂಪದ ಗಾಯಗಳನ್ನು ಮಾಡಿದ್ದು ಆ ಮೂಲಕ ಭಾ.ದಂ .ಸಂ. ಕಲಂ 323 ಸಹವಾಚಕ

34 ರಡಿಯಲ್ಲಿ ಶಿಕ್ಷಾರ್ಹ ಆರೋಪವನ್ನು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ.ಃ3** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ಮತ್ತು 3 ನೇ ಆರೋಪಿತರುಗಳು ಮೇಲೆ ಹೇಳಿದಂತೆ ಬೈಕ್ ನಲ್ಲಿ ಹೋಗುತ್ತಿದ್ದ ಸಾಕ್ಷಿ 1 ಮತ್ತು 2 ರವರನ್ನು ತಡೆದು ನಿಲ್ಲಿಸಿದ್ದು ಆ ಮೂಾಲಕ ಭಾ.ದಂ .ಸಂ. ಕಲಂ 341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಆರೋಪವನ್ನು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶಃ 4** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿತರುಗಳು ಸಾಕ್ಷಿ 1 ರವರು ಧರಿಸಿದ್ದ ಚೂಡಿದಾರ್ ಎಳೆದಾಡಿ ಎದೆಯ ಭಾಗದಲ್ಲಿ, ಭುಜದ ಭಾಗದಲ್ಲಿ ಹಾಗೂ ಚೂಡಿದಾರ್ ಪ್ಯಾಂಟ್ ನ ಮಂಡಿಯ ಹತ್ತಿರ ಹರಿದು ಹಾಕಿದ್ದು ಆ ಮೂಾಲಕ ಭಾ.ದಂ .ಸಂ. ಕಲಂ 354 (ಬಿ) ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಆರೋಪವನ್ನು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶಃ5** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ರಿಂದ 3 ನೇ ಆರೋಪಿತರುಗಳು ಸಾಕ್ಷಿ -1 ಮತ್ತು 2 ರವರಿಗೆ ನೀವಿಬ್ಬರು ನಮ್ಮೂರಿಗೆ ಬನ್ನಿ ಕತ್ತರಿಸಿ ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದು ಆ ಮೂಾಲಕ ಭಾ.ದಂ .ಸಂ. ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಆರೋಪವನ್ನು ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

<u>ಅಂಶ.ಃ6</u> ಯಾವ ಆದೇಶ?

**7.** ಎರಡೂ ಪಕ್ಷಕಾರರುಗಳ ವಾದ-ವಿವಾದಗಳನ್ನು ಆಲಿಸಿ ಕಡತದಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿದ ನಂತರ ಮೇಲಿನ ಪ್ರಶ್ನೆಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

1 ರಿಂದ 5 ನೇ ಅಂಶ ಃ ನಕರಾತ್ಮಕವಾಗಿರುತ್ತದೆ

ಅಂಶಃ 6 ಃ ಅಂತಿಮ ಆದೇಶದಂತೆ

<u>ಕಾರಣಗಳು</u>

**8.** 1 ರಿಂದ 5 ನೇ ಅಂಶ ಗಳು: ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಅಂತಿಮ ದೋಷಾರೋಪಣಾ ಪಟ್ಟಿಯಲ್ಲಿ ಪಟ್ಟಿ ಮಾಡಲಾಗಿರುವ ಒಟ್ಟು 9 ಜನ ಸಾಕ್ಷಿದಾರರಲ್ಲಿ ಚಾಸಾ -1 ಮತ್ತು 2 ಇಬ್ಬರು ಸಾಕ್ಷಿದಾರರನ್ನು ಫ್ರಾಸಾ -1 ಮತ್ತು 2 ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದು ಅವರಿಬ್ಬರೂ ತಮ್ಮ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾದ ಯಾವುದೇ ವಿವರಗಳನ್ನು ತಿಳಿಸಿರುವುದಿಲ್ಲ . ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಬ್ಬರನ್ನು ಪಾಟೀ ಸವಾಲಿಗೆ ಒಳಪಡಿಸಿ ಪ್ರಕರಣದ ಸಂಬಂಧ ಪ್ರಶ್ನಿಸಿದಾಗಲೂ ಸಹಾ ಅವರುಗಳು ಅಭಿಯೋಜನೆಗೆ ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಬೀತುಪಡಿಸಲು ಅಗತ್ಯವಿರುವ ಪೂರಕವಾದ ಯಾವುದೇ ಅಂಶಗಳನ್ನು ತಿಳಿಸಿರುವುದಿಲ್ಲ. ಅವರುಗಳ ಮೂಲಕ ಅಭಿಯೋಜನೆಯು ದೂರು, ಎರಡು ಮಹಜರ್ ಗಳು , Crpc ಕಲಂ 164 ರಡಿಯಲ್ಲಿನ ಹೇಳಿಕೆ , ಮತ್ತು ಗಾಯದ ಪ್ರಮಾಣ ಪತ್ರ ವನ್ನು ನಿಪಿ -1 ರಿಂದ 5 ಎಂದು ಮತ್ತು ಚೂಡಿದಾರ್ ಟಾಪ್ ಮತ್ತು ಪ್ಯಾಂಟ್ ನ್ನು ಒಟ್ಟಾಗಿ ಮು ಮಾ -1 ಗುರುತಿಸಿಕೊಂಡಿದ್ದು, ಫ್ರಾಸಾ- 2 ರವರ ಸಾಕ್ಷಿ ವಿಚಾರಣೆಯ ಮೂಲಕ ಅವರ ಹೇಳಿಕೆಯನ್ನು ನಿಪಿ -6 ಎಂದು ಗುರುತಿಸಿಕೊಂಡಿರುತ್ತದೆ . ಫ್ರಾಸಾ -1 ಮತ್ತು 2 ರವರ ಸಾಕ್ಷಿ ವಿಚಾರಣೆಯ ಮೂಲಕ ನಿಪಿ -1 ರಿಂದ 6 ನ್ನು ಸಾಬೀತುಗೊಳಿಸಲು ಮತ್ತು ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಬೀತುಗೊಳಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ . ಚಾಸಾ -1 ಮತ್ತು 2 ದೂರುದಾರರು, ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿಯಾಗಿದ್ದು ಅವರುಗಳೇ

ಅಭಿಯೋಜನೆಗೆ ಯಾವುದೇ ಪೂರಕ ಸಾಕ್ಷಿ ವಿಚಾರಣೆ ನೀಡದೇ ಇರುವ ಕಾರಣ ಉಳಿದ ಸಾಕ್ಷಿದಾರರುಗಳ ಸಾಕ್ಷಿ ವಿಚಾರಣೆಯ ಅಗತ್ಯ ಕಂಡುಬಂದಿಲ್ಲವೆಂದು ಅವರುಗಳನ್ನು ವಿಚಾರಣೆಯಿಂದ ಕೈಬಿಡಲಾಗಿದೆ . ಫ್ರಾಸಾ -1 ಮತ್ತು 2 ರವರ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಬೀತುಗೊಳಿಸುವ ಯಾವುದೇ ಅಂಶಗಳು ಕಂಡುಬರದಿದ್ದ ಕಾರಣ CRPC ಕಲಂ 313 ರಡಿಯಲ್ಲಿನ ಹೇಳಿಕೆಗೆ ವಿನಾಯಿತಿ ನೀಡಲಾಗಿದೆ . ಫ್ರಾಸಾ -1 ಮತ್ತು 2 ರವರ ಸಾಕ್ಷಿ ವಿಚಾರಣೆಯ ಮೂಲಕ ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಬೀತುಗೊಳಿಸಲು ಅಭಿಯೋಜನೆಯು ಸಂಪೂರ್ಣ ವಿಫವಾಗಿರುವ ಕಾರಣ ಮೇಲಿನ ಒಂದರಿಂದ ಐದನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ .

೬**ನೇ ಅಂಶಃ** ಮೇಲಿನ 1 ರಿಂದ 5 ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುವ ಕಾರಣ ಈ ಕೆಳಕಂಡಂತೆ ಆದೇಶಿಸಲಾಗಿದೆ .

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ ಕಲಂ. 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 3 ನೇ ಆರೋಪಿತರುಗಳ ವಿರುದ್ದ ಭಾ.,ದಂ . ಸಂ.ಕಲಂ. 323, 341, 354 (ಬಿ), 504 ಮತ್ತು 506 ಸಹವಾಚಕ 34 ರಡಿಯಲ್ಲಿ ಮಾಡಲಾಗಿರುವ ಗುರುತರ ಆರೋಪಗಳಿಂದ ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ .

1 ರಿಂದ 3 ನೇ ಆರೋಪಿತರುಗಳ ವೈಯಕ್ತಿಕ ಹಾಗೂ ಅವರುಗಳ ಪರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿದೆ.

ಮು ಮಾ-1 ಚೂಡಿದಾರ್ ಟಾಪ್ ಮತ್ತು ಪ್ಯಾಂಟ್ ಬೆಲೆ ಬಾಳದ ವಸ್ತ್ರಗಳಾಗಿರುವುದರಿಂದ ಅಪೀಲು ಅವಧಿಯ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ .

(ಈ ತೀರ್ಪನ್ನು ಬೆರಳಚ್ಚುಗಾರ್ತಿ ಶ್ರೀಮತಿ ಸಮ್ರೀನ್ ಬಾನುರವರಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ನಂತರ ಅದನ್ನು ಓದಿ, ತಿದ್ದಿ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 21-07-2026 ರಂದು ಘೋಷಿಸಲಾಗಿದೆ.)

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿ ವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ

## ಅನುಬಂಧ

ಅಭಿಯೋಜನೆ ಪರ ವಿಚಾರಣೆಯಾಗಿರುವ ಸಾಕ್ಷಿಗಳುಃ

ಪ್ರಾಸಾ.1 :ನಾಗಮಣಿ

ಪ್ರಾಸಾ.2 : ದಿಲೀಪ್

ಆರೋಪಿತರ ಪರವಾಗಿ ಸಾಕ್ಷಿದಾರರ ಪಟ್ಟಿ ಃ

-ಇಲ್ಲ -

ಅಭಿಯೋಜನೆಯ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿಃ

| | | |
|---|---|---|
| ನಿ.ಪಿ.1 | : | ದೂರು |
| ನಿ.ಪಿ.2 ಮತ್ತು 3 | : | ಎರಡು ಮಹಜರ್ |
| ನಿ.ಪಿ.4 | | Crpc ಕಲಂ 164 ರಡಿಯಲ್ಲಿನ ಹೇಳಿಕೆ |
| ನಿ.ಪಿ. 1 (ಎ) ರಿಂದ 4 (ಎ) | : | ಪ್ರಾಸಾ 1 ರವರ ಸಹಿ |
| ನಿ.ಪಿ. 5 | : | ಗಾಯದ ಪ್ರಮಾಣ ಪತ್ರ |
| ನಿ.ಪಿ.6 | : | ಪ್ರಾಸಾ- 2 ರವರ ಹೇಳಿಕೆ ಭಾಗ |

ಆರೋಪಿತರ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿಃ

- ಇಲ್ಲ-

ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲು ಗಳ ಪಟ್ಟಿಃ

ಮು ಮಾ ಃ ಚೂಡಿದಾರ್ ಟಾಪ್ ಮತ್ತು ಪ್ಯಾಂಟ್

**SD/-**
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ